## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ/7224/2021/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು
ದಿನಾಂಕ: 21.03.2023.

### ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ. ಚೆನ್ನವೀರಯ್ಯ ಹಿರೇಮಠ, ಗ್ರಾಮ ಲೆಕ್ಕಾಧಿಕಾರಿ, ಕೊಲ್ಹಾರ ತಾಲ್ಲೂಕು, ವಿಜಯಪುರ ಜಿಲ್ಲೆ. (2) ಶ್ರೀ. ಬಷೀರ್ ಎಲ್. ಚಿಕ್ಕಲಕಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅರಷಣಗಿ ಗ್ರಾಮ ಪಂಚಾಯತ್, ಕೊಲ್ಹಾರ ತಾಲ್ಲೂಕು, ವಿಜಯಪುರ ಜಿಲ್ಲೆ. (3) ಶ್ರೀ. ಯಳಗಿ, ಸಹಾಯಕ ಇಂಜಿನಿಯರ್-2, ಲೋಕೋಪಯೋಗಿ ಇಲಾಖೆ, ಬಸವನ ಬಾಗೇವಾಡಿ, ವಿಜಯಪುರ ಜಿಲ್ಲೆ. 4) ಶ್ರೀ ಭೀಮನಗೌಡ, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬಸವನ ಬಾಗೇವಾಡಿ, ವಿಜಯಪುರ, ರವರುಗಳು ಸರ್ಕಾರಿ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1) ದೂರುದಾರರಾದ ಶ್ರೀಮತಿ. ಶಾಂತವ್ವ ಗಂಡ ಶರಣಪ್ಪ ಕುಂಬಾರ, ಅರಷಣಗಿ ಗ್ರಾಮ, ಕೊಲ್ಹಾರ ತಾಲ್ಲೂಕು, ವಿಜಯಪುರ ಜಿಲ್ಲೆ ರವರು (ಇನ್ನುಮುಂದೆ ದೂರುದಾರರೆಂದು ಕರೆಯಲ್ಪಡುತ್ತಾರೆ) (1) ಶ್ರೀ. ಚೆನ್ನವೀರಯ್ಯ ಹಿರೇಮಠ, ಗ್ರಾಮ ಲೆಕ್ಕಾಧಿಕಾರಿ, ಕೊಲ್ಹಾರ ತಾಲ್ಲೂಕು, ವಿಜಯಪುರ ಜಿಲ್ಲೆ. (2) ಶ್ರೀ. ಬಷೀರ್ ಎಲ್. ಚಿಕ್ಕಲಕಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅರಷಣಗಿ ಗ್ರಾಮ ಪಂಚಾಯತ್, ಕೊಲ್ಹಾರ ತಾಲ್ಲೂಕು, ವಿಜಯಪುರ ಜಿಲ್ಲೆ. (3) ಶ್ರೀ. ಯಳಗಿ, ಸಹಾಯಕ ಇಂಜಿನಿಯರ್-2, ಲೋಕೋಪಯೋಗಿ ಇಲಾಖೆ, ಬಸವನ ಬಾಗೇವಾಡಿ,

ವಿಜಯಪುರ ಜಿಲ್ಲೆ. 4) ಶ್ರೀ ಭೀಮನಗೌಡ, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬಸವನ ಬಾಗೇವಾಡಿ, ವಿಜಯಪುರ, 5) ಶ್ರೀ ಮಕದುಮ್ ತಂದೆ ಅಬ್ದುಲ್ ಶೇಖ, ತಹಶೀಲ್ದಾರರು-2, ಕೊಲ್ಹಾರ ತಾಲೂಕು, ಪ್ರಸ್ತುತ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಯು.ಕೆ.ಪಿ. ಬೀಳಗಿ, ಬಾಗಲಕೋಟೆ ಜಿಲ್ಲೆ (ತನಿಖೆಯ ಕಾಲಕ್ಕೆ 4 ಮತ್ತು 5 ನೇ ಎದುರುದಾರರನ್ನು ಸೇರ್ಪಡೆಗೊಳಿಸಲಾಗಿದೆ). (ಇನ್ನು ಮುಂದೆ ಕ್ರಮವಾಗಿ 1 ರಿಂದ 5ನೇ ಎದುರುದಾರರೆಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿರುತ್ತಾರೆ.

2) <u>ದೂರಿನ ಸಾರಾಂಶ:-</u>

ದೂರುದಾರರು ತಮ್ಮ ದೂರಿನಲ್ಲಿ 2020-21ನೇ ಸಾಲಿನ ಆಗಸ್ಟ್-ಸೆಪ್ಟಂಬರ್ ತಿಂಗಳಲ್ಲಿ ಸುರಿದ ಭಾರಿ ಮಳೆಯಿಂದ ಕೊಲ್ಹಾರ ತಾಲ್ಲೂಕು ಅರಷಣಗಿ ಗ್ರಾಮದ ಮನೆ ನಂ.61/1 ರ ಮನೆಯು ದಿ: 26/09/2020 ರಂದು ಮಧ್ಯಾಹ್ನ 1:30 ರ ಸಮಯಕ್ಕೆ ಸಂಪೂರ್ಣವಾಗಿ ಬಿದ್ದು, ಮನೆಯಲ್ಲಿದ್ದ ಬಟ್ಟೆ, ಗೃಹಪಯೋಗಿ ವಸ್ತುಗಳು ಸೇರಿ ಹಾನಿಯಾಗಿದ್ದು, ಮನೆಯಲ್ಲಿ ವಾಸವಾಗಿದ್ದ ತನ್ನನ್ನು ಹಾಗೂ ಹೆರಿಗೆಯಾಗಿದ್ದ ತನ್ನ ಮಗಳು ಹಾಗೂ ಅವಳ ಮಗುವನ್ನು ಗ್ರಾಮಸ್ಥರ ಸಹಾಯದಿಂದ ಮನೆಯಿಂದ ಹೊರಗೆ ಕರೆತಂದು ಪ್ರಣಾಪಾಯದಿಂದ ಪಾರುಮಾಡಿ ನಂತರ ಒಂದು ಮನೆಯನ್ನು ಬಾಡಿಗೆ ಮಾಡಿ ಗ್ರಾಮಸ್ಥರು ಕೊಟ್ಟಿರುತ್ತಾರೆ.

ಮಳೆಯಿಂದ ಹಾನಿಗೊಳಗಾದ ತನ್ನ ಮನೆಯನ್ನು ಪುನರ್ ನಿರ್ಮಾಣ ಮಾಡಿಕೊಳ್ಳಲು ಮತ್ತು ಸಂತ್ರಸ್ತರ ಪರಿಹಾರ ಹಣವನ್ನು ನೀಡಲು ಗ್ರಾಮಲೆಕ್ಕಾಧಿಕಾರಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಾಗೂ ಸಹಾಯಕ ಇಂಜಿನಿಯರ್ ಸೇರಿಕೊಂಡು ತಮ್ಮ ಕರ್ತವ್ಯದ ಜವಬ್ದಾರಿಯನ್ನು ಮರೆತು ಮನೆ ಕಳೆದುಕೊಂಡ ತನಗೆ ಮನೆಯನ್ನು ಪರಿಶೀಲಿಸಿ ವಾಸವಿಲ್ಲದ ಮನೆಯೆಂದು ವರದಿ ಮಾಡಿಕೊಂಡು ತನ್ನನ್ನು

ಅರ್ಹ ಫಲಾನುಭವಿಗಳ ಪಟ್ಟಿಯಿಂದ ತೆಗೆದುಹಾಕಿ ನಿರ್ಲಕ್ಷ್ಯ ತೋರಿರುತ್ತಾರೆ. ಆದ್ದರಿಂದ ಪರಿಶೀಲಿಸಿ ಎದುರುದಾರರ ವಿರುದ್ಧ ಸೂಕ್ತ ಕ್ರಮ ಜರುಗಿಸಿ ಸರ್ಕಾರದಿಂದ ಬರುವ ಸಂತ್ರಸ್ತರ ಪರಿಹಾರಧನ ದಿಂದ ಮನೆ ನಿರ್ಮಾಣ ಮಾಡಿಸಿ ಪರಿಹಾರವನ್ನು ಕೊಡಿಸಿಕೊಡ ಬೇಕೆಂದು ಕೋರಿ ಸದರಿ ದೂರು ಸಲ್ಲಿಸಿರುತ್ತಾರೆ.

3) **1 ಮತ್ತು 3ನೇ ಎದುರುದಾರರು ದಿ: 09/09/2021 ಮತ್ತು 15/09/2021 ರಂದು ಆಕ್ಷೇಪಣೆಗಳನ್ನು ಸಲ್ಲಿಸಿದ್ದು,** ತಮ್ಮ ಆಕ್ಷೇಪಣೆಯಲ್ಲಿ ಅರ್ಜಿದಾರರು ತನ್ನ ಮನೆ ಬಿದ್ದ ಬಗ್ಗೆ ತಹಶೀಲ್ದಾರರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಗೆ ದಿ: 05/10/2020 ರಂದು ಅರ್ಜಿ ನೀಡಿದ್ದರಿಂದ ಮತ್ತು ದಿ: 25/09/2020 ರಂದು ಸರ್ಕಾರವು ಹೊರಡಿಸಿದ ಸುತ್ತೋಲೆಯನ್ವಯ ಬಿದ್ದ ಮನೆಗಳ ಬಗ್ಗೆ ಜಂಟಿ ತನಿಖೆ ಮಾಡಿ ವರದಿ ಮಾಡಲು ತಹಶೀಲ್ದಾರರ ನಿರ್ದೇಶನದ ಪ್ರಕಾರ ಅರಷಣಗಿ ಗ್ರಾಮಕ್ಕೆ ದಿ: 21/10/2020 ರಂದು ಜಂಟಿಯಾಗಿ ಭೇಟಿ ನೀಡಿ ಮನೆಯನ್ನು ಪರಿಶೀಲಿಸಿ ನೋಡಲಾಗಿ ಮನೆ ಬಿದ್ದಿದ್ದು ನಿಜವಿದ್ದು, ಆದರೆ ಅರ್ಜಿದಾರರು ಹೇಳಿದ ದಿನಾಂಕದಂದು ಮನೆಬಿದ್ದ ಬಗ್ಗೆ ಅವಶೇಷಗಳನ್ನು ಪರಿಶೀಲಿಸಿ ನೋಡಲಾಗಿ ಆಗಸ್ಟ್-ಸೆಪ್ಟಂಬರ್ 2020 ತಿಂಗಳಲ್ಲಿ ಆದ ಮಳೆಗೆ ಮನೆಬಿದ್ದ ಕುರುಹು ಕಾಣದ ಕಾರಣ ಅತೀವೃಷ್ಟಿಯಿಂದ ಮನೆಯು ಬಿದ್ದ ಬಗ್ಗೆ ಸಾಕ್ಷ್ಯಾಧಾರಗಳು ಕಂಡುಬಂದಿರುವುದಿಲ್ಲ.

4) ದೂರುದಾರರು ತಮ್ಮ ತೋಟದ ಮನೆಯಲ್ಲಿ ವಾಸವಿದ್ದು, ಪರಿಶೀಲನೆ ಕಾಲಕ್ಕೆ ಗೈರುಹಾಜರಾಗಿದ್ದರಿಂದ ಮತ್ತು ಗ್ರಾಮಸ್ಥರ ಸಮಕ್ಷಮ

ವಿಚಾರಣೆ ಮಾಡಲಾಗಿ ಅತೀವೃಷ್ಟಿಯ ಕಾಲಕ್ಕಿಂತ ಮುಂಚೆ ಮನೆಬಿದ್ದಿದ್ದು ಇರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ, ಸಮಿತಿಯಲ್ಲಿರುವ ಮೂರು ಸದಸ್ಯರು ಸೇರಿ ಸದರಿ ಮನೆಯು ವಾಸವಿಲ್ಲದ ಮನೆ ಎಂದು ಬರೆಯಲಾಗಿದೆ ಎಂಬಂತೆ ನಮೂದಿಸಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

5) **2ನೇ ಎದುರುದಾರರು ದಿ: 09/09/2021 ರಂದು ಆಕ್ಷೇಪಣೆಯನ್ನು ಸಲ್ಲಿಸಿದ್ದು**, 2020-21 ನೇ ಸಾಲಿನ ಆಗಸ್ಟ್-ಸೆಪ್ಟಂಬರ್ ತಿಂಗಳಲ್ಲಿ ಸುರಿದ ಭಾರಿ ಮಳೆಯಿಂದ ಅರಷಣಿಗಿ ಗ್ರಾಮದ ಮನೆ ನಂ.61/1 ದೂರುದಾರರಿಗೆ ಸೇರಿದ ಮನೆಯಾಗಿದ್ದು, ಸದರಿ ಮನೆಗೆ ಪರಿಹಾರ ನೀಡುವಲ್ಲಿ ಲೋಪ ಆಗಿರುವುದಾಗಿ ಅಪಾದಿಸಿರುವ ಹಿನ್ನೆಲೆಯಲ್ಲಿ ದೂರುದಾರರು ದಿ: 05/10/2020 ರಂದು ತಹಶೀಲ್ದಾರರಿಗೆ ಸಲ್ಲಿಸಿದ ಅರ್ಜಿಯ ವಿಚಾರಣೆಗಾಗಿ ತಾನು ಗ್ರಾಮ ಪಂಚಾಯಿತಿಗೆ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿ ಬಿದ್ದ ಮನೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಸದರಿ ಅರ್ಜಿಯನ್ನು ನಿಯಮಾನುಸಾರ ತಹಶೀಲ್ದಾರರು, ಕೊಲ್ಹಾರ ರವರ ಕಛೇರಿಗೆ ವರ್ಗಾಯಿಸಿದ್ದು ಇರುತ್ತದೆ.

6) ಸರ್ಕಾರದ ಸುತ್ತೋಲೆಯನ್ವಯ ದಿ: 25/09/2020 ರಂದು ಹಾನಿಗೊಳಗಾದ ಮನೆಗಳ ಸಮೀಕ್ಷೆ ಮಾಡಲು ಜಂಟಿ ಸಮೀಕ್ಷಾ ತಂಡವನ್ನು ರಚಿಸಿದ್ದು, ತಹಶೀಲ್ದಾರರ ನಿರ್ದೇಶನದಂತೆ ದೂರುದಾರರ ಮನೆಯನ್ನು ಪರಿಶೀಲಿಸಲಾಗಿ ಮನೆ ಬಿದ್ದಿದ್ದು ನಿಜವಿದ್ದು, ಆದರೆ ಅರ್ಜಿದಾರರು ಹೇಳಿದ ದಿನಾಂಕದಂದು ಮನೆ ಬಿದ್ದ ಬಗ್ಗೆ ಅವಶೇಷಗಳನ್ನು ಪರಿಶೀಲಿಸಲಾಗಿ ಸದರಿ ಮನೆಯು ಆಗಸ್ಟ್-

ಸೆಪ್ಟಂಬರ್ ತಿಂಗಳಲ್ಲಿ ಆದ ಮಳೆಗೆ ಮನೆ ಬಿದ್ದ ಯಾವುದೇ ಕುರುಹುಗಳು ಕಂಡುಬಾರದ ಕಾರಣ ಹಾಗೂ ಅರ್ಜಿದಾರರು ಬಿದ್ದ ಮನೆಯಲ್ಲಿ ಇರದ ಕಾರಣ ತಮ್ಮ ಕುಟುಂಬ ಸಮೇತ ಅವರ ತೋಟದ ಮನೆಯಲ್ಲಿ ವಾಸವಿದ್ದು, ಈ ಕುರಿತು ಗ್ರಾಮಸ್ಥರನ್ನು ವಿಚಾರಿಸಲಾಗಿ ಅತೀವೃಷ್ಟಿಯ ಕಾಲಕ್ಕಿಂತ ಮುಂಚೆ ಮನೆ ಬಿದ್ದಿರುವುದಾಗಿ ತಿಳಿದುಬಂದಿದ್ದರಿಂದ ಹಾಗೂ ಬಿದ್ದಿರುವ ಮನೆಯಲ್ಲಿ ಯಾರೂ ವಾಸವಿಲ್ಲದ ಕಾರಣ ಮನೆಯು ವಾಸವಿಲ್ಲದ ಮನೆ ಎಂದು ವರದಿ ನೀಡಿರುವುದು ನಿಜವಿರುತ್ತದೆ ಎಂಬಂತೆ ನಮೂದಿಸಿ ಆಕ್ಷೇಪಣೆ ಸಲ್ಲಿಸಿರುತ್ತಾರೆ.

7) **ದೂರುದಾರರಿಂದ ದಿ: 27/01/2022 ರಂದು ಪ್ರತ್ಯುತ್ತರ ಸ್ವೀಕರಿಸಿದ್ದು,** ತಮ್ಮ ಪ್ರತ್ಯುತ್ತರದಲ್ಲಿ 2020-21ನೇ ಸಾಲಿನ ಆಗಸ್ಟ್-ಸೆಪ್ಟಂಬರ್ ತಿಂಗಳಿನ ನೆರೆ ಹಾವಳಿ ಸಂದರ್ಭದಲ್ಲಿ ಸುರಿದ ಭಾರಿ ಮಳೆಯಿಂದ ಅರಸಣಗಿ ಗ್ರಾಮದ ಆಸ್ತಿ ನಂ.61/1 ರ ಮನೆಯು ಬಿದ್ದು ಹಾನಿಯಾಗಿದ್ದು, ಗ್ರಾಮ ಲೆಕ್ಕಾಧಿಕಾರಿಗಳು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಹಾಯಕ ಅಭಿಯಂತರರು ಪರಿಹಾರ ನೀಡುವಲ್ಲಿ ತಮ್ಮ ಕರ್ತವ್ಯಲೋಪ ಎಸಗಿರುತ್ತಾರೆ. ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ.

8) ಪರಿಶೀಲನೆಗೆ ಬಂದ ಸಮಯದಲ್ಲಿ ಅದೇ ಓಣಿಯ 20 ಮೀಟರ್ ಸಮೀಪದಲ್ಲಿರುವ ಮನೆ ನಂ.49/2 ರ ಮಾಲೀಕ ಶ್ರೀ ಬಸವರಾಜ ಗೂಗಿಹಾಳ ಇವರ ಮನೆಯಲ್ಲಿ ತಾನು ಬಾಡಿಗೆಯಿದ್ದು, ಆ ಸಮಯದಲ್ಲಿ ತನ್ನ ಮಗಳು ಹೆರಿಗೆಗಾಗಿ ಬಂದು 17 ದಿನಗಳಾಗಿದ್ದು,

ನಾನು ಊರು ಬಿಟ್ಟು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ. ತಾನು ಮನೆಬಿದ್ದ ಸಂಧರ್ಬದಲ್ಲಿ ತೋಟದಲ್ಲಿ ವಾಸಿಸುತ್ತಿದ್ದೆನು ಎಂಬುವುದಕ್ಕೆ ಯಾವುದೇ ಕಾರಣ ಇರುವುದಿಲ್ಲ. ಏಕೆಂದರೆ ನಾನು ತೋಟವನ್ನು ಹೊಂದಿರುವುದಿಲ್ಲ. ಮನೆಬಿದ್ದ ದಿ: 26/09/2020 ರಂದು 26/01/2021 ರ ವರೆಗೆ ಬಸವರಾಜ ಬೂದಿಹಾಳ ರವರ ಮನೆಯಲ್ಲಿ ಪ್ರತೀ ತಿಂಗಳಿಗೆ ರೂ.1,000/- ಬಾಡಿಗೆ ರೂಪದಲ್ಲಿ ವಾಸವಾಗಿದ್ದೆವು. ತನ್ನ ಮನೆಯು ಬಿದ್ದು ಹೋಗಿದ್ದರಿಂದ ವಾಸವಾಗಲು ಯೋಗ್ಯವಾಗಿರದ ಕಾರಣ ಬಿದ್ದ ಮನೆಯಲ್ಲಿಯೇ ಪರಿಶೀಲನೆಗೆ ಬಂದಾಗ ತಾನು ಇರಲಿಲ್ಲ.

9) ಮನೆಬಿದ್ದಿದ್ದು ನಿಜ ಎಂದು ಎದುರುದಾರರು ಒಪ್ಪಿಕೊಳ್ಳುತ್ತಿದ್ದು, ಅತೀವೃಷ್ಟಿ ಸಮಯಕ್ಕೆ ಮುಂಚೆ ಮನೆ ಬಿದ್ದಿರುವುದಾಗಿ ಗ್ರಾಮಸ್ಥರು ಹೇಳುತ್ತಿದ್ದಾರೆನ್ನುವುದು ಸರಿಯಲ್ಲ. ಈ ರೀತಿ ಗ್ರಾಮಸ್ಥರು ಯಾರೂ ಹೇಳಿರುವುದಿಲ್ಲ. ತಾನು ಬಾಡಿಗೆ ಇರುವ ಮನೆಯು ಸೋರುತ್ತಿದ್ದು, ಆ ಕಾರಣದಿಂದ ಅತೀವೃಷ್ಟಿಯಿಂದ ಬಿದ್ದ ತನ್ನ ಮನೆಗೆ ಪರಿಹಾರ ಒದಗಿಸುತ್ತಾರೆಂದು ಭರವಸೆಯಿಂದ ಈಗ ತಾತ್ಕಾಲಿಕವಾಗಿ ತಗಡಿನ ಶೆಡ್‌ನ್ನು ನಿರ್ಮಿಸಿಕೊಂಡು ಜಮೀನಿನಲ್ಲಿ ವಾಸವಾಗಿರುತ್ತೇನೆ ಎಂಬಂತೆ ನಮೂದಿಸಿ ಪ್ರತ್ಯುತ್ತರ ಸಲ್ಲಿಸಿರುತ್ತಾರೆ.

10) **ತನಿಖೆಯ ಕಾಲಕ್ಕೆ ದಿ: 19.04.2022 ರಂದು ದಿ:19/04/2022 ರಂದು ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ವಿಜಯಪುರ ರವರಿಂದ ತನಿಖಾ ವರದಿಯನ್ನು ಪಡೆದುಕೊಂಡಿದ್ದು,** ತಮ್ಮ ತನಿಖಾ ವರದಿಯಲ್ಲಿ ದಿನಾಂಕ: 22-02-2022 ರಂದು ತಹಶೀಲ್ದಾರ

ಕೋಲ್ಹಾರ ಇವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ಮಾನ್ಯ ಜಿಲ್ಲಾಧಿಕಾರಿಗಳು, ವಿಜಯಪುರ ಇವರ ನಿರ್ದೇಶನದ ಪ್ರಕಾರ ಸನ್ 2020-21ನೇ ಸಾಲಿನಲ್ಲಿ ಭಾರಿ ಮಳೆಯಿಂದ ಮನೆಗಳು ಹಾನಿಯಾದ ಬಗ್ಗೆ ಸಮಿಕ್ಷೆ ಕೈಗೊಳ್ಳಲು ಆಯಾ ಗ್ರಾಮಕ್ಕೆ ಸಂಬಂಧಪಟ್ಟ ಗ್ರಾಮ ಲೆಕ್ಕಾಧಿಕಾರಿಗಳು, ಪಿಡಿಓ, ಕಿರಿಯ ಅಭಿಯಂತರರು, ಲೋಕೋಪಯೋಗಿ ಇಲಾಖೆ ಮತ್ತು ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಲಾಖೆ ಇವರನ್ನು ಒಳಗೊಂಡ ಜಂಟಿ ತಂಡವನ್ನು ರಚಿಸಿರುತ್ತಾರೆ.

11) ಸದರಿ ತಂಡದ ಅಧಿಕಾರಿಗಳಾದ ಶ್ರೀ ಎ.ಇ.ಯಾಳಗಿ, ಸಹಾಯಕ ಅಭಿಯಂತರರು, ಪಂಚಾಯತ ರಾಜ್ ಇಲಾಖೆ, ಶ್ರೀ ಭಿಮನಗೌಡ ಬಿರಾದಾರ, ಕಿರಿಯ ಅಭಿಯಂತರರು, ಪಿಡಬ್ಲ್ಯೂಡಿ, ಬ.ಬಾಗೇವಾಡಿ, ಶ್ರೀ ಬಶೀರ ಎಲ್. ಚಿಕ್ಕಲಗಿ, ಪಿಡಿಓ, ಅರಷಣಗಿ ಮತ್ತು ಶ್ರೀ ಚನ್ನವೀರಯ್ಯ ಹಿರೇಮಠ, ಗ್ರಾಮ ಲೆಕ್ಕಾಧಿಕಾರಿಗಳು, ಅರಷಣಗಿ ಇವರುಗಳು ಅರಷಣಗಿ ಗ್ರಾಮದ ಶ್ರೀ ಶಾಂತವ್ವ ಶರಣಪ್ಪ ಕುಂಬಾರ, ಇವರ ಹೆಸರಿನಲ್ಲಿರುವ ಮನೆ.ನಂ. 61/1 ನೇದ್ದಕ್ಕೆ ಭೇಟಿ ನೀಡಿ, ಸ್ಥಾನಿಕ ಚೌಕಾಸಿ ಮಾಡಿ ಹಾನಿಯಾದ ಮನೆಗಳ ಬಗ್ಗೆ ತನಿಖಾ ವರದಿಯನ್ನು ಅನುಬಂಧ-1 & 2 ರಲ್ಲಿ ಸಲ್ಲಿಸಿರುತ್ತಾರೆ. ಅನುಬಂಧ-1 ರಲ್ಲಿ ವಾಸವಿಲ್ಲದ ಮನೆ ಎಂದು ಅನುಬಂಧ-2 ರಲ್ಲಿ ಮನೆ ಹಾನಿಯಾದ ವರ್ಗ ಕಾಲಂನಲ್ಲಿ ಈ ಹಿಂದೆ ಬಿದ್ದ ಮನೆ ಎಂದು ಅನುಬಂಧ-2 14ನೇ ಕಾಲಂನಲ್ಲಿ ದುರಸ್ಥಿಪಡಿಸಿಕೊಂಡು ಮನೆಯಲ್ಲಿ ವಾಸಿಸಬಹುದು ಎಂದು ವರದಿಯನ್ನು ನೀಡಿರುತ್ತಾರೆ.

12) ದಿನಾಂಕ 22-02-2022 ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬ.ಬಾಗೇವಾಡಿ ಇವರು ತಮ್ಮ ವರದಿಯಲ್ಲಿ ದಿನಾಂಕ 18-02-2022 ರಂದು ಅರಷಣಗಿ ಗ್ರಾಮಕ್ಕೆ ಭೇಟಿ ನೀಡಿ ಶ್ರೀಮತಿ ಶಾಂತವ್ವ ಕುಂಬಾರ ಇವರ ಹೆಸರಿನಲ್ಲಿದ್ದ ಮನೆ.ನಂ. 61/1 ಮನೆಯನ್ನು ಪರಿಶೀಲನೆ ಮಾಡಿ, ಸದರಿ ಮನೆಯು ದಿನಾಂಕ 26-09-2020ರ ಮೊದಲು ಅಂದರೆ ಸುಮಾರು 18 ತಿಂಗಳ ಹಿಂದೆ ಹಾನಿಯಾಗಿರಬಹುದಾಗಿದೆ ಎಂದು ವರದಿ ನೀಡಿರುತ್ತಾರೆ.

13) ದಿನಾಂಕ 03-03-2022 ರಂದು ಶ್ರೀಮತಿ ಶಾಂತವ್ವ ಗಂಡ ಶರಣಪ್ಪ ಕುಂಬಾರ ಇವರು ತಮ್ಮ ಹೇಳಿಕೆಯೊಂದಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆ. ಸದರಿಯವರು ತಮ್ಮ ಹೇಳಿಕೆಯಲ್ಲಿ ಮನೆ ಆಸ್ತಿ ನಂ. 61/1 ಮನೆಯು ದಿನಾಂಕ 26-09-2020 ರಂದು ಸುರಿದ ಮಳೆಗೆ ಬಿದ್ದಿರುತ್ತದೆ. ಮೂರನಾಲ್ಕು ದಿನಗಳ ನಂತರ ಬಶೀರ ಚಿಕ್ಕಲಗಿ, ಪಿಡಿಓ ಅರಷಣಗಿ ಇವರಿಗೆ ಕರೆದುಕೊಂಡು ಬಂದು ಮನೆ ಬಿದ್ದ ಬಗ್ಗೆ ತೋರಿಸಿದ್ದು ಸದರಿ ಪಿಡಿಓ ರವರು ಪರಿಶೀಲಿಸಿ ನನ್ನ ಜೊತೆ ಮನೆಯ ಮುಂದೆ ನಿಂತುಕೊಂಡು ಫೋಟೊ ತೆಗೆದುಕೊಂಡಿರುತ್ತಾರೆ. ನಂತರ ಮನೆ ಬಿದ್ದ ಬಗ್ಗೆ ಪರಿಹಾರಕ್ಕಾಗಿ ದಿನಾಂಕ 05-10-2020 ರಂದು ತಹಶೀಲ್ದಾರ ಕೋಲ್ಹಾರ ಹಾಗೂ ಪಿಡಿಓ ಅರಷಣಗಿ ಇವರಿಗೆ ಅರ್ಜಿಯನ್ನು ಕೊಟ್ಟಿರುತ್ತಾರೆ. ಮನೆ ಬಿದ್ದ ನಂತರ 4 ತಿಂಗಳು ಬಾಡಿಗೆ ಮನೆಯಲ್ಲಿದ್ದು ನಂತರ ಊರಿಗೆ ಹತ್ತಿರ ಇರುವ ಹೊಲದಲ್ಲಿ ಪತ್ರಾಸ್ ಶೆಡ್ಡ ಹಾಕಿ ಅಲ್ಲಿಗೆ ವಿದ್ಯುತ್

ಆರ್.ಆರ್.ನಂ. ಎಆರ್ಎಸ್ಎಲ್-55 ಮೀಟರ್ ಅನ್ನು ಸ್ಥಳಾಂತರಿಸಿ ಪತ್ರಾಸ್ ಶೆಡ್ಡಿಗೆ ಜೊಡಣೆ ಮಾಡಿರುವುದಾಗಿ ತಿಳಸಿರುತ್ತಾರೆ.

14) ಆಸ್ತಿ.ನಂ. 61/1 ಇ-ಸ್ವತ್ತು ಉತಾರೆಗಾಗಿ ಪಿಡಿಓ ಅರಷಣಗಿ ರವರಿಗೆ ಮನೆ ಬಿಳುವ ಒಂದು ವರ್ಷದ ಮೊದಲು ಅರ್ಜಿಯನ್ನು ಕೊಟ್ಟಿದ್ದು ದಿನಾಂಕ: 09-04-2020 ರಂದು ಗ್ರಾಮ ಪಂಚಾಯತಿ ಸಿಬ್ಬಂದಿ ಹಾಗೂ ಸರ್ಕಾರಿ ಭೂಮಾಕರು ಮನೆಯ ಜಾಗೆ ಅಳತೆಮಾಡಿ ಪಿಡಿಓ ರವರಿಗೆ ಕೊಟ್ಟಿರುತ್ತಾರೆ. ಪಿಡಿಓ ರವರು ದಿನಾಂಕ 21-08-2021 ರಂದು ತಮಗೆ ಇ-ಸ್ವತ್ತು ಉತಾರೆಯನ್ನು ಕೊಡಿಸಿರುತ್ತಾರೆ. ಸದರಿ ಮನೆಯು ದಿನಾಂಕ 26-09-2020 ಸುರಿದ ಭಾರಿ ಮಳೆಗೆ ಮನೆ ಬಿದ್ದಿರುವುದು ನಿಜ ಇರುತ್ತದೆ ಅಂತ ತಮ್ಮ ಹೇಳಿಕೆ ನೀಡಿರುತ್ತಾರೆ.

15) ದೂರುದಾರರು ವಾಸವಾಗಿದ್ದ ಮನೆಗೆ ವಿದ್ಯುತ್ ಸಂಪರ್ಕ ಅಳವಡಿಸಿದ್ದು, ವಿದ್ಯುತ್ ಸಂಪರ್ಕ ಚಾಲ್ತಿಯಲ್ಲಿದ್ದು ವಿದ್ಯುತ್ ಬಿಲ್ನ್ನು ದಿ.17-12-2021 ರಂದು ರೂ.2,500/- ಮತ್ತು ದಿನಾಂಕ: 20-12-2021 ರಂದು ರೂ.1,785/- ಗಳನ್ನು ಪಾವತಿಸಿರುವದು ಕಂಡು ಬರುತ್ತದೆ.

16) ಆರೋಗ್ಯ ಅಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ತೆಲಗಿ ಇವರು ನೀಡಿರುವ ಜನನ ಪ್ರಮಾಣ ಪತ್ರದಲ್ಲಿ ದೂರುದಾರರ ಮಗಳು ಶ್ರೀಮತಿ ಶ್ರೀದೇವಿ ಗಂಡ ಬಸವರಾಜ ಕುಂಬಾರ ಇವರಿಗೆ ಬಸವನ ಬಾಗೇವಾಡಿ ತಾಲೂಕ, ಅರಷಣಗಿ ಗ್ರಾಮ ಈ ವಿಳಾಸದಲ್ಲಿ ವಾಸ

ಇರುವಾಗ ದಿನಾಂಕ 08-09-2020 ರಂದು ಗಂಡು ಮಗು ಜನನವಾಗಿರುತ್ತದೆ. ದೂರುದಾರರು ತಮ್ಮ ಮನೆ ನಂ:61/1 ಅಗಷ್ಟ/ಸಪ್ಟಂಬರ್ ತಿಂಗಳಲ್ಲಿ ಸುರಿದ ಭಾರಿ ಮಳೆಯಿಂದ ಶೀಥಿಲಗೊಂಡ ಬಗ್ಗೆ ಹಾಗೂ ಪರಿಹಾರ ನೀಡುವ ಕುರಿತು, ದಿನಾಂಕ 05-10-2020 ರಂದು ತಹಶೀಲ್ದಾರ ಕೊಲ್ಹಾರ ಹಾಗೂ ಪಿ.ಡಿ.ಓ, ಗ್ರಾಮ ಪಂಚಾಯತ ಅರಷಣಗಿ ಇವರಿಗೆ ಮನವಿ ಸಲ್ಲಿಸಿರುತ್ತಾರೆ.

17) ದಿನಾಂಕ 09-03-2022 ರಂದು ತಹಶೀಲ್ದಾರ ಕೊಲ್ಹಾರ ಇವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ದಿನಾಂಕ 26-09-2020 ಮತ್ತು 27-09-2020 ರಂದು ಮಳೆಯಿಂದ ಹಾನಿಯಾದ ಮನೆಗಳ ಪ್ರಾಥಮಿಕ ವರದಿಯನ್ನು ದಿನಾಂಕ 28-09-2020 ರಂದು ತಹಶೀಲ್ದಾರ ಕೊಲ್ಹಾರ ಇವರು ಜಿಲ್ಲಾಧಿಕಾರಿಗಳು, ವಿಜಯಪುರ ಇರಿಗೆ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಅರಷಣಗಿ ಗ್ರಾಮದ ಶ್ರೀಮತಿ ಶಾಂತವ್ವ ಕುಂಬಾರ ಇವರ ಮನೆಯು ಕೂಡಾ ಬಾಗಶಃ ಹಾನಿ ಆಗಿರುವ ಬಗ್ಗೆ ವರದಿಯಲ್ಲಿ ನಮೂದಿಸಲಾಗಿರುತ್ತದೆ.

18) ಎದುರದಾರ ಶ್ರೀ ಬಸೀರ ತಂದೆ ಲಾಲಸಾಬ ಚಿಕ್ಕಲಕಿ, ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತ ಅರಷಣಗಿ ಸಾ|| ಜೈನಾಪೂರ, ತಾಲೂಕ ಬಬಲೇಶ್ವರ ಇವರ ಹೇಳಿಕೆ ಪಡೆದುಕೊಂಡಿದ್ದು ಇವರು ತಮ್ಮ ಹೇಳಿಕೆಯಲ್ಲಿ, ದೂರುದಾರರ ಹೆಸರಿನಲ್ಲಿರುವ ಮನೆ ನಂ:61/1 ಇದು ಅಗಷ್ಟ/ಸಪ್ಟಂಬರ್ ತಿಂಗಳಲ್ಲಿ ಸುರಿದ ಭಾರಿ ಮಳೆಯಿಂದಾಗಿ ದಿ:26-09-2020 ರಂದು ಮನೆ

ಬಿದ್ದಿದ್ದು, ಪರಿಹಾರ ನೀಡುವಂತೆ ದಿ:05-10-2020 ರಂದು ನನಗೆ ಪತ್ರದ ಮೂಲಕ ಮನವಿ ಮಾಡಿಕೊಂಡಿದ್ದರಿಂದ ಮನೆಯ ಸ್ಥಳಕ್ಕೆ ಭೇಟಿ ಮಾಡಿ ಪರಿಶೀಲಿಸಿ, ನಿಯಮಾನುಸಾರ ಮುಂದಿನ ಕ್ರಮಕ್ಕಾಗಿ ತಹಶೀಲ್ದಾರ ಕೊಲ್ಹಾರ ರವರ ಕಛೇರಿಗೆ ನಿವೇದಿಸಿಕೊಂಡಿರುತ್ತೇನೆ.

19) ಮನೆಗಳು ಬಿದ್ದ ಬಗ್ಗೆ ಸರಕಾರದ ಆದೇಶದಂತೆ ತಹಶೀಲ್ದಾರ ರವರು ಜಂಟಿ ಸಮಿಕ್ಷೆ ಮಾಡಿ ವರದಿ ಸಲ್ಲಿಸಲು ಸೂಚಿಸಿದಂತೆ ದಿನಾಂಕ 21-10-2020 ರಂದು ಪಂಚಾಯತರಾಜ್ ಇಲಾಖೆ ಇಂಜನೀಯರ್, ಪಿಡಬ್ಲ್ಯೂಡಿ ಇಂಜನೀಯರ್, ಗ್ರಾಮಲೆಕ್ಕಾಧಿಕಾರಿ ಹಾಗೂ ನಾನು ಸ್ಥಳಕ್ಕೆ ಭೇಟಿ ಮಾಡಿದ್ದು ದೂರುದಾರರ ಮನೆಯು ಬಿದ್ದಿದ್ದು ನಿಜವಿರುತ್ತದೆ. ಸದರಿ ಮನೆ ಬಿದ್ದ ಬಗ್ಗೆ ವರದಿಯನ್ನು ತಯಾರಿಸಿ ಸದರಿ ಮನೆಯಲ್ಲಿ ವಾಸಿಸಬಹುದಾಗಿದೆಂದು ಮತ್ತು ಸಂತ್ರಸ್ಥರಿಗೆ ಪರಿಹಾರ ನೀಡಬಹುದೆಂದು ಅವರ ಆಧಾರಕಾರ್ಡ, ಬ್ಯಾಂಕ್ ವಿವರಣೆಯೊಂದಿಗೆ ಅನುಬಂಧ-2 ರಲ್ಲಿ ನಾನು ಸಹಿ ಮಾಡಿ ತಹಶೀಲ್ದಾರ ಕಾರ್ಯಾಲಯಕ್ಕೆ ವರದಿಯನ್ನು ಸಲ್ಲಿಸಿರುತ್ತೇನೆ.

20) ಅನುಬಂಧ-2ರ ಮನೆ ಹಾನಿಯಾದ ವರ್ಗ ಕಾಲಂದಲ್ಲಿ ಯಾರೋ ನಂತರದಲ್ಲಿ "ಈ ಹಿಂದೆ ಬಿದ್ದ ಮನೆ" ಎಂದು ಹಸ್ತಾಕ್ಷರದಲ್ಲಿ ನಮೂದಿಸಿರುತ್ತಾರೆ. ಆದರೆ ಅಂತಿಮವಾಗಿ ಜಂಟಿ ಸಮೀಕ್ಷಾ ವರದಿಯನ್ನು ತಯಾರಿಸುವಾಗ ಇಂಜನೀಯರ್ ರವರು ದೂರುದಾರರ ಮನೆ ನಂ:61/1 ಇದು "ವಾಸವಿಲ್ಲದ ಮನೆ" ಎಂದು ನಮೂದಿಸಿ ನನ್ನ ಸಹಿ ಪಡೆಯದೆ ಮತ್ತು ನನ್ನ ಗಮನಕ್ಕೆ ತರದೆ ವರದಿಯನ್ನು ತಹಶೀಲ್ದಾರ ರವರಿಗೆ ಸಲ್ಲಿಸಿರುತ್ತಾರೆ. ಆದ್ದರಿಂದ

ದೂರುದಾರ ಶ್ರೀಮತಿ ಶಾಂತವ್ವ ಗಂಡ ಶರಣಪ್ಪ ಕುಂಬಾರ ಸಾ॥ ಅರಷಣಗಿ ಇವರಿಗೆ ಪರಿಹಾರ ಮಂಜೂರಿಯಾಗಿರುವದಿಲ್ಲ ಎಂಬುದಾಗಿ ಹೇಳಿಕೆ ನೀಡಿರುತ್ತಾರೆ.

21) ಶ್ರೀ ಭೀಮನಗೌಡ ತಂದೆ ಮಲ್ಲನಗೌಡ ಬಿರಾದಾರ, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬಸವನ ಬಾಗೇವಾಡಿ ಇವರ ಹೇಳಿಕೆ ಪಡೆದುಕೊಂಡಿದ್ದು, ಇವರು ತಮ್ಮ ಹೇಳಿಕೆಯಲ್ಲಿ, ಸರಕಾರದ ಆದೇಶದ ಪ್ರಕಾರ ಮಳೆಗೆ ಬಿದ್ದ ಮನೆಗಳ ಬಗ್ಗೆ ಜಂಟಿ ತನಿಖೆ ಮಾಡಿ ವರದಿ ಮಾಡಲು ಮಾನ್ಯ ತಹಶೀಲದಾರರ ನಿರ್ದೇಶನದ ಪ್ರಕಾರ ಅರಷಣಗಿ ಗ್ರಾಮಕ್ಕೆ ದಿನಾಂಕ 21-10-2020 ರಂದು ಜಂಟಿಯಾಗಿ ಭೇಟಿ ನೀಡಿ ಮನೆಯನ್ನು ಪರಿಶೀಲಿಸಿ ನೋಡಲಾಗಿ, ಶ್ರೀಮತಿ ಶಾಂತವ್ವ ಗಂಡ ಶರಣಪ್ಪ ಕುಂಬಾರ ಸಾ॥ ಅರಷಣಗಿ ಇವರ ಮನೆ ಬಿದ್ದದ್ದು ನಿಜವಿರುತ್ತದೆ. ಜಂಟಿಯಾಗಿ ಸ್ಥಳ ಪರಿಶೀಲಿಸಿ ಹಾನಿ ಆದ ಬಗ್ಗೆ ಪ್ರತಿಶತ ಮೌಲ್ಯಮಾಪನ ಮಾಡಿ ವರದಿ ನೀಡಲಾಗಿದೆ.

22) ಮಾನ್ಯ ಜಿಲ್ಲಾಧಿಕಾರಿಗಳು ಅಧ್ಯಕ್ಷತೆಯಲ್ಲಿ ಮನೆ ಹಾನಿಯ ಕುರಿತು ನಡೆದ ವಿಡಿಯೋ ಸಂವಾದದಲ್ಲಿ ನಿರ್ದೇಶಿಸಿದಂತೆ ವಾಸವಿಲ್ಲದ ಮನೆಗಳು ಹಾನಿಯಾದಲ್ಲಿ ಆ ಮನೆಗಳಿಗೆ ಪರಿಹಾರ ನೀಡಲು ಅವಕಾಶವಿರುವದಿಲ್ಲ ಎಂದು ನಿರ್ದೇಶನ ನೀಡಿದ ಪ್ರಕಾರ, ವಾಸವಿದ್ದು ಮಳೆಯಿಂದ ಹಾನಿಯಾದ ಮನೆಗಳನ್ನು ಮಾತ್ರ ಪ್ರತಿಶತ ಮೌಲ್ಯಮಾಪನ ಮಾಡಿ, ಅನುಬಂಧ-1 ರಲ್ಲಿ 6 ಮತ್ತು 6ಎ ರಲ್ಲಿ ಮೌಲ್ಯ ಮಾಪನ ವರದಿಯನ್ನು ಸಲ್ಲಿಸಿದ್ದು, ಶ್ರೀಮತಿ ಶಾಂತವ್ವ ಗಂಡ

ಶರಣಪ್ಪ ಕುಂಬಾರ ಸಾ|| ಅರಷಣಗಿ ಇವರ ಮನೆಯು ವಾಸವಿಲ್ಲದ ಮನೆ ಆಗಿರುವದರಿಂದ ಅನುಬಂಧ-1 ರಲ್ಲಿರುವ ಕಾಲಂ. 6 ಮತ್ತು 6ಎ ರಲ್ಲಿ ಮೌಲ್ಯವನ್ನು ನಮೂದು ಮಾಡಿರುವದಿಲ್ಲ ಮತ್ತು ಅನುಬಂಧ-2 ರಲ್ಲಿ ಸಹಿ ಮಾಡುವ ಬಗ್ಗೆ ನಮಗೆ ಯಾವುದೇ ನಿರ್ದೇಶನ ಇರುವದಿಲ್ಲ ಹಾಗೂ ಅನುಬಂಧ-1 ರಲ್ಲಿ ಪಿಡಿಓ, ಅರಷಣಗಿ ಗ್ರಾಮ ಪಂಚಾಯತ ಇವರು ಯಾಕೆ ಸಹಿ ಮಾಡಿರುವದಿಲ್ಲ ಎಂಬುದು ನನಗೆ ಗೊತ್ತಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ.

23) ಶ್ರೀ ವಿಜಯಕುಮಾರ ತಂದೆ ಮಹಾಂತಪ್ಪ ಯಾಳಗಿ, ಸಹಾಯಕ ಅಭಿಯಂತರರು-2 (ನಿವೃತ್ತ), ಪಂಚಾಯತ ರಾಜ್ ಇಂಜನೀಯರಿಂಗ್ ಉಪ ವಿಭಾಗ, ಬಸವನ ಬಾಗೇವಾಡಿ ಇವರ ಹೇಳಿಕೆ ಪಡೆದುಕೊಂಡಿದ್ದು, ಇವರು ತಮ್ಮ ಹೇಳಿಕೆಯಲ್ಲಿ, ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮನೆ ಹಾನಿಯ ಕುರಿತು ನಡೆದ ವಿಡಿಯೋ ಸಂವಾದದಲ್ಲಿ ನಿರ್ದೇಶಿಸಿದಂತೆ ವಾಸವಿಲ್ಲದ ಮನೆಗಳು ಹಾನಿಯಾದಲ್ಲಿ ಆ ಮನೆಗಳಿಗೆ ಪರಿಹಾರ ನೀಡಲು ಅವಕಾಶವಿರುವುದಿಲ್ಲ ಎಂದು ನಿರ್ದೇಶನ ನೀಡಿದ ಪ್ರಕಾರ, ವಾಸವಿದ್ದು ಮಳೆಯಿಂದ ಹಾನಿಯಾದ ಮನೆಗಳನ್ನು ಮಾತ್ರ ಪ್ರತಿಶತ ಮೌಲ್ಯಮಾಪನ ಮಾಡಿ, ಅನುಬಂಧ-1 ರಲ್ಲಿ 6 ಮತ್ತು 6ಎ ರಲ್ಲಿ ಮೌಲ್ಯ ಮಾಪನ ವರದಿಯನ್ನು ಸಲ್ಲಿಸಿದ್ದು, ಶ್ರೀಮತಿ ಶಾಂತವ್ವ ಗಂಡ ಶರಣಪ್ಪ ಕುಂಬಾರ ಸಾ|| ಅರಷಣಗಿ ಇವರ ಮನೆಯು ವಾಸವಿಲ್ಲದ ಮನೆ ಆಗಿರುವದರಿಂದ ಅನುಬಂಧ-1 ರಲ್ಲಿರುವ ಕಾಲಂ. 6 ಮತ್ತು 6ಎ ರಲ್ಲಿ ಮೌಲ್ಯವನ್ನು ನಮೂದು ಮಾಡಿರುವದಿಲ್ಲ. ಅನುಬಂಧ-2 ರಲ್ಲಿ ಸಹಿ ಮಾಡುವ ಬಗ್ಗೆ ಯಾವುದೇ ನಿರ್ದೇಶನ ಇರುವದಿಲ್ಲ. ಅನುಬಂಧ-1

ರಲ್ಲಿ ಪಿಡಿಓ, ಅರಷಣಗಿ ಗ್ರಾಮ ಪಂಚಾಯತ ಇವರು ಯಾಕೆ ಸಹಿ ಮಾಡಿರುವದಿಲ್ಲ ಎಂಬುದು ನನಗೆ ಗೊತ್ತಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ.

24) ಶ್ರೀ ಚನ್ನವೀರಯ್ಯ ತಂದೆ ಬಸವರಾಜ ಹಿರೇಮಠ, ಗ್ರಾಮ ಲೆಕ್ಕಾಧಿಕಾರಿ, ಗ್ರಾಮ ಅರಷಣಗಿ ಸಾ॥ ಕೂಡಗಿ ಇವರ ಹೇಳಿಕೆ ಪಡೆದುಕೊಳ್ಳಲಾಗಿ ಇವರು ತಮ್ಮ ಹೇಳಿಕೆಯಲ್ಲಿ, ದೂರುದಾರರ ಮನೆ ನಂ:61/1 ಇದು ಅಗಷ್ಟ/ಸಪ್ಟಂಬರ್ ತಿಂಗಳಲ್ಲಿ ಸುರಿದ ಭಾರಿ ಮಳೆಯಿಂದಾಗಿ ದಿನಾಂಕ 26-09-2020 ರಂದು ಮನೆ ಬಿದ್ದಿದ್ದು, ಈ ಬಗ್ಗೆ ಪರಿಹಾರ ನೀಡುವಂತೆ ಅರ್ಜಿದಾರರು ಅದೆ ದಿನಾಂಕದಂದು ನನಗೆ ಮೌಖಿಕವಾಗಿ ತಿಳಿಸಿದ್ದು ಇರುತ್ತದೆ. ನಾನು ಸಹಿತ ದಿನಾಂಕ 26-09-2020 ರಂದು ಮಾನ್ಯ ತಹಶಿಲ್ದಾರ, ಕೋಲ್ಹಾರ ಕಛೇರಿಯ ಸಿಬ್ಬಂದಿ ಹಾಗೂ ವಿಷಯ ನಿರ್ವಾಹಕರಾದ ಶ್ರೀಮತಿ ಭಾಗ್ಯಶ್ರೀ ಪಾಟೀಲ, ಗ್ರಾಮ ಲೆಕ್ಕಾಧಿಕಾರಿಗಳಿಗೆ ತಿಳಿಸಿದ್ದು ಇರುತ್ತದೆ ಮತ್ತು ತಹಶೀಲ್ದಾರ ಕೋಲ್ಹಾರ ರವರು ದಿನಾಂಕ 28-09-2020 ರಂದು ತಮ್ಮ ಕಛೇರಿಯಿಂದ ಸದರಿ ಕೋಲ್ಹಾರ ತಾಲೂಕು ವ್ಯಾಪ್ತಿಯಲ್ಲಿ ಯಾವ ಯಾವ ಗ್ರಾಮಗಳಲ್ಲಿ ಮನೆಗಳು ಹಾನಿಯಾಗಿರುತ್ತವೆಯೋ ಅವುಗಳ ಒಂದು ಪ್ರಾಥಮಿಕ ವರದಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ, ವಿಜಯಪುರ ರವರಿಗೆ ಕಳುಹಿಸಿಕೊಟ್ಟಿರುತ್ತಾರೆ.

25) ಶ್ರೀಮತಿ ಶಾಂತವ್ವ ಶರಣಪ್ಪ ಕುಂಬಾರ, ಇವರ ಮನೆ ಭಾಗಶಃ ಹಾನಿಯಾಗಿರುವ ಬಗ್ಗೆ ವರದಿ ನೀಡಿರುತ್ತೇವೆ. ನಂತರ ಸರಕಾರದ

ಸುತ್ತೋಲೆ ಆದೇಶ ಹಾಗೂ ಮಾನ್ಯ ತಹಶೀಲ್ದಾರ, ಕೋಲ್ಹಾರ ರವರ ಆದೇಶದ ಪ್ರಕಾರ ಭಾರಿ ಮಳೆಯಿಂದ ಹಾನಿಗೆ ಒಳಗಾದ ಮನೆಗಳ ಬಗ್ಗೆ ಜಂಟಿ ಸಮಿಕ್ಷೆ ಮಾಡಿ ವರದಿ ಸಲ್ಲಿಸುವ ಕುರಿತು ದಿನಾಂಕ 21-10-2020 ರಂದು ಪಂಚಾಯತರಾಜ್ ಇಲಾಖೆ ಇಂಜನೀಯರ್, ಪಿಡಬ್ಲೂಡಿ ಇಂಜನೀಯರ್, ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಮತ್ತು ನಾನು ಸ್ಥಳಕ್ಕೆ ಭೇಟಿ ಮಾಡಿದ್ದು ದೂರುದಾರರ ಮನೆಯು ಬಿದ್ದಿದ್ದು ನಿಜವಿರುತ್ತದೆ. ಅನುಬಂಧ-1 & 2 ರಲ್ಲಿ ಹಾನಿಯಾದ ಮನೆಗಳ ಬಗ್ಗೆ ತಹಶೀಲ್ದಾರ, ಕೋಲ್ಹಾರ ರವರಿಗೆ ಮಾಹಿತಿ ಸಲ್ಲಿಸಿರುತ್ತೇವೆ. ಸದರಿ ಅನುಬಂಧ-1ರ ನಮೂನೆಯಲ್ಲಿ ಪಿಡಿಓ, ಗ್ರಾಮ ಪಂಚಾಯತ, ಅರಷಣಗಿ ರವರು ಸಹಿ ಮಾಡಿರುವುದಿಲ್ಲ, ಅವರು ಯಾಕೆ ಸಹಿ ಮಾಡಿರುವುದಿಲ್ಲ ಅಂತ ಗೊತ್ತಿರುವುದಿಲ್ಲ. ಅನುಬಂಧ-2ರಲ್ಲಿ ಪಿಡಿಓ, ಅರಷಣಗಿ ಹಾಗೂ ನಾನು ಸಹಿ ಮಾಡಿರುತ್ತೇವೆ, ಆದರೆ ಇಂಜಿನೀಯರವರುಗಳು ಸಹಿ ಮಾಡಿರುವುದಿಲ್ಲ ಆಮೇಲೆ ಮಾಡುತ್ತೇವೆ ಅಂತ ಹೇಳಿದರು.

26) ಅನುಬಂಧ-2ರ ನಮೂನೆಯಲ್ಲಿ ಮನೆಯಿಂದ ಹಾನಿಯಾದ ವರ್ಗ ಎಂಬ ಕಾಲಂ.ನಂ. 4, 4ಎ, 5 ನೇದ್ದರಲ್ಲಿ **'ಈ ಹಿಂದೆ ಬಿದ್ದ ಮನೆ'** ಎಂದು ನಾನು ಬರೆದಿರುವುದಿಲ್ಲ. ಅದನ್ನು ಇಂಜಿನೀಯರ್ ರವರುಗಳು ತುಂಬಿ ಕೊಡಬೇಕಾಗಿರುತ್ತದೆ. ಸದರಿ ಅರ್ಜಿದಾರರ ಬಿದ್ದ ಮನೆಯನ್ನು ಪರಿಶೀಲಿಸಿದಾಗ ಸದರಿ ಮನೆಯಲ್ಲಿ ವಾಸವಿದ್ದ ಬಗ್ಗೆ ಯಾವುದೇ ಕುರುಹುಗಳು ಕಂಡು ಬಂದಿರುವುದಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ.

27) ತನಿಖಾಧಿಕಾರಿಗಳು ತಮ್ಮ ಅಂತಿಮ ಅಭಿಪ್ರಾಯದಲ್ಲಿ ಅಗಷ್ಟ/ಸೆಪ್ಟೆಂಬರ್-2020 ರಲ್ಲಿ ಸುರಿದ ಭಾರಿ ಮಳೆಯಿಂದ ಹಾನಿ ಒಳಗಾದ ಮನೆಗಳ ಸಮೀಕ್ಷಾ ವರದಿಯನ್ನು ಅನುಬಂಧ-1 ಮತ್ತು 2 ರಲ್ಲಿ ತಹಶೀಲ್ದಾರ ಕೊಲ್ಹಾರ ಇವರಿಗೆ ಎದುರದಾರರಾದ 1) **ಶ್ರೀ ಬಸೀರ ತಂದೆ ಲಾಲಸಾಬ ಚಿಕ್ಕಲಕಿ, ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು,** ಗ್ರಾಮ ಪಂಚಾಯತ ಅರಷಣಗಿ ಸಾ॥ ಜೈನಾಪೂರ 2) **ಶ್ರೀ ವಿಜಯಕುಮಾರ ತಂದೆ ಮಹಾಂತಪ್ಪ ಯಾಳಗಿ, ಸಹಾಯಕ ಅಭಿಯಂತರರು-2 (ನಿವೃತ್ತ),** ಪಂಚಾಯತ ರಾಜ್ ಇಂಜನೀಯರಿಂಗ್ ಉಪ ವಿಭಾಗ, ಬಸವನ ಬಾಗೇವಾಡಿ 3) **ಶ್ರೀ ಭೀಮನಗೌಡ ತಂದೆ ಮಲ್ಲನಗೌಡ ಬಿರಾದಾರ, ಸಹಾಯಕ ಅಭಿಯಂತರರು,** ಲೋಕೋಪಯೋಗಿ ಇಲಾಖೆ ಬಸವನ ಬಾಗೇವಾಡಿ 4) **ಶ್ರೀ ಚನ್ನವೀರಯ್ಯ ತಂದೆ ಬಸವರಾಜ ಹಿರೇಮಠ, ಗ್ರಾಮ ಲೆಕ್ಕಾಧಿಕಾರಿ,** ಗ್ರಾಮ ಅರಷಣಗಿ ಸಾ॥ ಕೂಡಗಿ ಇವರುಗಳು ಸಲ್ಲಿಸಿರುತ್ತಾರೆ.

28) ಅನುಬಂಧ-1 ಜಂಟಿ ತನಿಖಾ ತಂಡದ ಸದಸ್ಯರಾದ ಎದುರದಾರ-1 ರವರು ಸಹಿ ಮಾಡಿರುವದಿಲ್ಲ. ಅನುಬಂಧ-2 ರಲ್ಲಿ ಜಂಟಿ ತನಿಖಾ ತಂಡದ ಸದಸ್ಯರಾದ ಎದುರದಾರ-2 ಮತ್ತು 3 ರವರು ಸಹಿ ಮಾಡಿರುವದಿಲ್ಲ. ಅನುಬಂಧ-2 ರಲ್ಲಿ **"ಈ ಹಿಂದೆ ಬಿದ್ದ ಮನೆ"** ಎಂದು ಎದುರದಾರರಾದ 1, 4 ರವರು ಇದನ್ನು ನಾವು ನಮೂದಿಸಿರುವದಿಲ್ಲ ಮತ್ತು 2, 3 ರವರು ಇದು ನಮಗೆ ಸಂಬಂಧಿಸಿದಿರುವದಿಲ್ಲ ಅಂತಾ ಜಂಟಿ ಸಮೀಕ್ಷೆ ಬಗ್ಗೆ ಬೇರೆ ಬೇರೆ ಹೇಳಿಕೆಗಳನ್ನು ನೀಡಿರುತ್ತಾರೆ. ಕಾರಣ ಅನುಬಂಧ-1 ಮತ್ತು 2 ರಲ್ಲಿ

ಸಲ್ಲಿಸಿದ ವರದಿಯು ಎದುರದಾರರಾದ 1, 2, 3, 4 ರವರು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡದೆ ವರದಿ ತಯಾರಿಸಿರುವುದು ದಾಖಲೆಗಳಿಂದ ಕಂಡು ಬರುತ್ತದೆ.

29) ಅನುಬಂಧ-1 ರಲ್ಲಿ **"ವಾಸವಿಲ್ಲದ ಮನೆ"** ಅನುಬಂಧ-2 ರಲ್ಲಿ **"ಈ ಹಿಂದೆ ಬಿದ್ದ ಮನೆ"** ಎಂದು ತಪ್ಪು ವರದಿಯನ್ನು ಸಲ್ಲಿಸಿ, ಸನ್ 2020-21ನೇ ಸಾಲಿನಲ್ಲಿ ಅತಿವೃಷ್ಟಿಯಿಂದ ಹಾನಿ ಒಳಗಾದ ಮನೆಯ ಅರ್ಹ ಫಲಾನುಭವಿ ಶ್ರೀಮತಿ ಶಾಂತವ್ವ ಗಂಡ ಶರಣಪ್ಪ ಕುಂಬಾರ ಸಾ॥ ಅರಷಣಗಿ ಇವರನ್ನು ಉದ್ದೇಶಪೂರ್ವಕವಾಗಿ ಅನರ್ಹಗೊಳಿಸಿರುವದು ಮೇಲ್ನೋಟಕ್ಕೆ ಕಂಡು ಬರುತ್ತದೆ ಮತ್ತು ಎದುರದಾರ 1 ರಿಂದ 4 ನೇದವರು ಸಲ್ಲಿಸಿರುವ ತಪ್ಪು ಜಂಟಿ ಸಮಿಕ್ಷಾ ವರದಿಯನ್ನು ಎದುರದಾರ 5) **ಶ್ರೀ ಮಕದುಮ್ ತಂದೆ ಅಬ್ದುಲ್‌ಶೇಖ ಬಾಗವಾನ, ತಹಶಿಲ್ದಾರ-2, ಕೊಲ್ಹಾರ ತಾಲೂಕ, ಪ್ರಸ್ತುತ:** ವಿಶೇಷ ಭೂಸ್ವಾಧೀನಾಧಿಕಾರಿಗಳು,ಭೂಸ್ವಾಧೀನಾಧಿಕಾರಿಗಳ ಕಾರ್ಯಾಲಯ, ಕೃಷ್ಣಾ ಮೇಲ್ದಂಡೆ ಯೋಜನೆ, ಜೀಳಗಿ ಇವರು ಪರಿಶೀಲನೆ ಮಾಡದೆ ಸರಕಾರಕ್ಕೆ ಸಲ್ಲಿಸಿರುವದು ಮೇಲ್ನೋಟಕ್ಕೆ ಕಂಡು ಬರುತ್ತದೆಂದು ಅಭಿಪ್ರಾಯದೊಂದಿಗೆ ಸಲ್ಲಿಸಿರುತ್ತಾರೆ.

30) **ದಿನಾಂಕ: 13.06.2022 ರಂದು 1ನೇ ಎದುರುದಾರರಿಂದ ತನಿಖಾ ವರದಿಗೆ ಸಲ್ಲಿಸಿರುವ ಆಕ್ಷೇಪಣೆಯನ್ನು ಸ್ವೀಕರಿಸಿದ್ದು,** ತಮ್ಮ ಆಕ್ಷೇಪಣೆಯಲ್ಲಿ ಅರಷಣಗಿ ಗ್ರಾಮದ ದೂರುದಾರರ ಮನೆ **ಸಂಖ್ಯೆ:** 61/1 ಮನೆಯು 2020-21ನೇ ಆಗಸ್ಟ್/ಸೆಪ್ಟೆಂಬರ್ ತಿಂಗಳಲ್ಲಿ ಸುರಿದ ಮಳೆಯಿಂದಾಗಿ ದಿ: 26/09/2020 ರಂದು ಬಿದ್ದಿರುತ್ತದೆ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅರಷಣಗಿ ಗ್ರಾಮ ಪಂಚಾಯತ್

ರವರ ಹೇಳಿಕೆ ಪ್ರಕಾರ ತಹಶೀಲ್ದಾರ್ ಕಛೇರಿಗೆ ಬೆಳಗ್ಗೆ 11 ಗಂಟೆಗೆ ದೂರವಾಣಿ ಮೂಲಕ ವರದಿ ಮಾಡಲಾಗಿದೆ.

31) ದಿ: 21/10/2020 ರಂದು ಕೊಲ್ಹಾರ ತಾಲ್ಲೂಕಿನಲ್ಲಿ ಬಿದ್ದ ಮನೆಗಳ ಜಂಟಿ ಸಮೀಕ್ಷೆ ಮಾಡಲು ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಲೆಕ್ಕಾಧಿಕಾರಿ, ಅರಷಣಗಿ, ಪಂಚಾಯತ್ ರಾಜ್ ಇಲಾಖೆಯ ಇಂಜಿನೀಯರ್ ಮತ್ತು ಪಿಡಬ್ಲ್ಯೂಡಿ ಇಂಜಿನೀಯರ್ ಇವರನ್ನು ಒಳಗೊಂಡ ತಂಡವನ್ನು ತಹಶೀಲ್ದಾರರು, ಕೊಲ್ಹಾರ ಇವರು ರಚನೆ ಮಾಡಿ ಸಮೀಕ್ಷೆಗೆ ಆದೇಶಿಸಿರುತ್ತಾರೆ. ದಿ: 21/10/2020 ರಂದು ಅರಷಣಗಿ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ದೂರುದಾರರ ಮನೆಯು ದಿ: 26/09/2020 ಕ್ಕಿಂತ ಮೊದಲು ಬಿದ್ದಿರುತ್ತದೆ ಎಂದು ಕಂಡುಬಂದಿರುತ್ತದೆ. ಯಾರೊಬ್ಬರು ಮನೆಯಲ್ಲಿ ವಾಸವಿರುವುದು ಕಂಡುಬಾರದ ಕಾರಣ, ವಾಸವಿಲ್ಲದ ಮನೆ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ತಿಳಿಸಿರುತ್ತಾರೆ.

32) ದಿನಾಂಕ: 21/10/2020 ರಂದು ಸ್ಥಳ ತನಿಖೆಗೆ ದೂರುದಾರರ ಮನೆಗೆ ಹೋದಾಗ ಸಮೀಕ್ಷಾ ತಂಡಕ್ಕೆ ಸದರಿ ಮನೆಯಲ್ಲಿ ದೂರುದಾರರು ವಾಸವಿರುವ ಕುರಿತು ಯಾವುದೇ ಕುರುಹುಗಳು ಕಂಡುಬಂದಿರುವುದಿಲ್ಲ. ಮನೆಯಲ್ಲಿ ಒಂದು ದೊಡ್ಡ ಪ್ರಮಾಣದ ಬಾಯಿ ತೆರೆದುಕೊಂಡಿರುವ ಹಳೆ ಕಾಲದ ಹಗೆ ಕಂಡುಬಂದಿದ್ದು, ಸದರಿ ಹಗೆಯು ದವಸಧಾನ್ಯ ಸಂಗ್ರಹಿಸುವ ಸ್ಥಳವಾಗಿರುತ್ತದೆ. ಆದ್ದರಿಂದ ಆಗಸ್ಟ್-ಸೆಪ್ಟೆಂಬರ್ 2020 ತಿಂಗಳಲ್ಲಿ ಭಾರಿ ಮಳೆ ಸುರಿದ ಸಮಯದಲ್ಲಿ ಬಿದ್ದ ಮನೆ ಇರುವುದಿಲ್ಲ. ದಿ: 09/11/2020 ರ

ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ 2020-21 ನೇ ಆಗಸ್ಟ/ಸೆಪ್ಟೆಂಬರ್ ತಿಂಗಳಲ್ಲಿ ವಾಸವಿರುವ ಬಿದ್ದ ಮನೆಗಳಿಗೆ ಮಾತ್ರ ಪರಿಹಾರ ನೀಡಲು ಅರ್ಹವಾಗಿರುತ್ತವೆ. ಆದ್ದರಿಂದ ದೂರುದಾರರು ಸದರಿ ಮನೆಯಲ್ಲಿ ವಾಸವಾಗಿರದ ಕಾರಣ ಪರಿಹಾರಕ್ಕೆ ಅರ್ಹವಲ್ಲದ ಪ್ರಕರಣ ಎಂದು ಸಮೀಕ್ಷಾ ತಂಡ ವರದಿ ಸಲ್ಲಿಸಿರುತ್ತದೆ. ಇದರಲ್ಲಿ ತಮ್ಮದು ಯಾವುದೇ ಅಲಕ್ಷತನ ಇರುವುದಿಲ್ಲ ಎಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.

33) **2ನೇ ಎದುರುದಾರರು ದಿ: 07.03.2022 ರ ತಮ್ಮ ಹೇಳಿಕೆಯಲ್ಲಿ** ಈ ಮೊದಲು ತಾನು ಮನೆ ಬಿದ್ದ ಬಗ್ಗೆ ವರದಿಯನ್ನು ತಯಾರಿಸಿ, ಸದರಿ ಮನೆಯಲ್ಲಿ ವಾಸಿಸಬಹುದಾಗಿದೆ ಎಂದು ಮತ್ತು ಸಂತ್ರಸ್ತರಿಗೆ ಪರಿಹಾರ ನೀಡಬಹುದೆಂದು ಅವರ ಆಧಾರ ಕಾರ್ಡ, ಬ್ಯಾಂಕ್ ವಿವರಣೆಯೊಂದಿಗೆ ಅನುಬಂಧ-2 ರಲ್ಲಿ ತಾನು ಸಹಿ ಮಾಡಿ, ತಹಶೀಲ್ದಾರ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತೇನೆ. ಅನುಬಂಧ-2 ರ ಮನೆ ಹಾನಿಯಾದ ವರ್ಗ ಕಾಲಂ. ನಲ್ಲಿ ಮನೆ ಹಾನಿಯಾದ ಪ್ರಮಾಣದ ಬಗ್ಗೆ ಪ್ರತ್ಯೇಕವಾಗಿ ಇಂಜಿನೀಯರ್ ರವರು ವರದಿ ಮಾಡುವುದರಿಂದ, ಕಾಲಂ. ನಲ್ಲಿ ಏನು ಬರೆಯದೆ, ಖಾಲಿ ಬಿಟ್ಟಿದ್ದು, ಸದರಿ ವರದಿಯಲ್ಲಿ ಯಾರೋ ನಂತರದಲ್ಲಿ ಈ ಹಿಂದೆ ಬಿದ್ದ ಮನೆ ಎಂದು, ಹಸ್ತಾಕ್ಷರದಲ್ಲಿ ನಮೂದಿಸಿರುತ್ತಾರೆ ಎಂಬಂತೆ ಹೇಳಿಕೆ ನೀಡಿರುತ್ತಾರೆ.

34) **3ನೇ ಎದುರುದಾರರಿಂದ ದಿ: 28-11-2022 ರ ತನಿಖಾ ವರದಿಗೆ ಆಕ್ಷೇಪಣೆ ಸ್ವೀಕರಿಸಿದ್ದು,** ತಮ್ಮ ಆಕ್ಷೇಪಣೆಯಲ್ಲಿ ತಾನು ಒಬ್ಬ

ಅಭಿಯಂತರನಾಗಿ ಮೇಲಾಧಿಕಾರಿಗಳು ವಹಿಸಿದ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡಿರುತ್ತೇನೆ. ತನ್ನ ಕೆಲಸ ಕೇವಲ ಮಳೆಗೆ ಬಿದ್ದ ಮನೆಗಳ ಅಂದಾಜು ಮೌಲ್ಯ ಮಾಡುವುದು. ದೂರುದಾರರ ಮನೆಯನ್ನು ಪರಿಶೀಲಿಸಿ ಹಾನಿಯ ಬಗ್ಗೆ ಪ್ರತಿಶತ ಮೌಲ್ಯಮಾಪನ ಮಾಡಿ ವರದಿ ನೀಡಲಾಗಿದೆ.

35) ಸ್ಥಳೀಯ ಅಧಿಕಾರಿಗಳಾದ ಗ್ರಾಮ ಲೆಕ್ಕಾಧಿಕಾರಿ ಹಾಗೂ ಪಿಡಿಓ ರವರ ಹೇಳಿಕೆ ಮತ್ತು ಸ್ಥಳ ಪರಿಶೀಲನೆಯಿಂದ ವಾಸವಿಲ್ಲದ ಮನೆಯೆಂದು ಉಲ್ಲೇಖಿಸಲಾಗಿದೆ. ಗ್ರಾಮ ಲೆಕ್ಕಾಧಿಕಾರಿಗಳು ತಮ್ಮ ಹೇಳಿಕೆಯ ಪುಟ 146 ರಲ್ಲಿ ಹಾಗೂ ಪಿಡಿಓ ರವರು ತಮ್ಮ ಹೇಳಿಕೆಯ ಪುಟ 57 ಮತ್ತು 32 ರಂತೆ ಹೇಳಿಕೆ ದಾಖಲಿಸಿದ್ದು, ಆದರೆ ಲೋಕಾಯುಕ್ತರವರ ಮುಂದೆ ಗ್ರಾಮ ಲೆಕ್ಕಾಧಿಕಾರಿಗಳು ತಮ್ಮ ಹೇಳಿಕೆಯನ್ನು ಬದಲಿಸಿರುತ್ತಾರೆ. ತಾನು ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ. ತಾನು ಈಗಾಗಲೇ ದಿ: 31/07/2021 ರಂದು ವಯೋನಿವೃತ್ತಿ ಹೊಂದಿರುತ್ತೇನೆ ಎಂಬಂತೆ ನಮೂದಿಸಿ ಆಕ್ಷೇಪಣೆ ಸಲ್ಲಿಸಿರುತ್ತಾರೆ.

36) **4ನೇ ಎದುರುದಾರರಿಂದ ದಿ:30-06-2022 ರ ತನಿಖಾ ವರದಿಗೆ ಆಕ್ಷೇಪಣೆ ಸ್ವೀಕರಿಸಿದ್ದು,** ತಮ್ಮ ಆಕ್ಷೇಪಣೆಯಲ್ಲಿ ದಿ:31-03-2021 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ 3 ಜನರ ವಿರುದ್ಧ ದೂರು ದಾಖಲಾಗಿದ್ದು, ತನ್ನನ್ನು ಪ್ರಕರಣದಲ್ಲಿ ನಂತರ ಸೇರಿಸಲಾಗಿದೆ. ತಾನು ತನಗೆ ಮೇಲಾಧಿಕಾರಿಗಳು ವಹಿಸಿದ ಕಾರ್ಯವನ್ನು ನಿರ್ವಹಿಸಿರು ತ್ತೇನೆ. ತನ್ನ ಕೆಲಸ ಕೇವಲ ಮಳೆಗೆ

ಬಿದ್ದ ಮನೆಗಳ ಅಂದಾಜು ಮೌಲ್ಯ ಮಾಡುವುದು ಹಾನಿಯಾದ ಬಗ್ಗೆ ಪರಿಶೀಲಿಸಿ ಪ್ರತಿಶತ ಮೌಲ್ಯ ಮಾಪನ ಮಾಡಿ ವರದಿಯಲ್ಲಿ ನಮೂದಿಸಿರುತ್ತೇನೆ.

37) ಸ್ಥಳಿಯ ಅಧಿಕಾರಿಗಳಾದ ಗ್ರಾಮ ಲೆಕ್ಕಾಧಿಕಾರಿ, ಪಂಚಾಯತ ಅಭಿವೃದ್ಧಿ ಅಧಿಕಾರಿ, ಸ್ಥಳ ಪರಿಶೀಲನೆ ವೇಳೆ ಹಾಜರಿದ್ದು, ಮನೆಯನ್ನು ತೋರಿಸಿದ್ದು, ಸದರಿ ಮನೆಯು ವಾಸವಿಲ್ಲದ ಮನೆಯೆಂದು ಉಲ್ಲೇಖಿಸಿ ಸಹಿಯೊಂದಿಗೆ ತಹಸೀಲ್ದಾರರಿಗೆ ಸಲ್ಲಿಸಲಾಗಿದೆ. ಗ್ರಾಮ ಲೆಕ್ಕಾಧಿಕಾರಿಗಳು ತಮ್ಮ ಹೇಳಿಕೆ ಪುಟ 17 ರಲ್ಲಿ ಹಾಗೂ ಪಿಡಿಓ ರವರು ತಮ್ಮ ಹೇಳಿಕೆ ಪುಟ 18 ಮತ್ತು 21 ರಲ್ಲಿ ವಾಸವಿಲ್ಲದ ಮನೆ ಎಂದು ಒಪ್ಪಿಕೊಂಡಿದ್ದು, ಆದರೆ ಸ್ಥಳೀಯ ಅಧಿಕಾರಿಗಳು ತನಿಖಾಧಿಕಾರಿಗೆ ನೀಡಿದ ಮಾಹಿತಿಯ ಪುಟ 73 ಮತ್ತು 89 ರಲ್ಲಿ ತಮ್ಮ ಹೇಳಿಕೆಗಳನ್ನು ಬದಲಿಸಿ ನೀಡಿರುತ್ತಾರೆ. ತಮ್ಮಿಂದ ಯಾವುದೇ ಕರ್ತವ್ಯಲೋಪ ಆಗಿರುವುದಿಲ್ಲ ಎಂಬಂತೆ ಆಕ್ಷೇಪಣೆ ಸಲ್ಲಿಸಿರುತ್ತಾರೆ.

38) **ದಿ: 08/06/2022 ರಂದು 5ನೇ ಎದುರುದಾರರಿಂದ ತನಿಖಾ ವರದಿಗೆ ಆಕ್ಷೇಪಣೆ ಸ್ವೀಕರಿಸಿದ್ದು,** ತಮ್ಮ ಆಕ್ಷೇಪಣೆಯಲ್ಲಿ ತಾನು ದಿ: 07/01/2021 ರಂದು ಕೊಲ್ಹಾರ ತಹಶೀಲ್ದಾರ ಹುದ್ದೆಯಿಂದ ಬಿಡುಗಡೆಗೊಂಡಿದ್ದು, ದೂರುದಾರರು ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ ಹಾಗೂ ತನಿಖಾ ಅಧಿಕಾರಿಗಳು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗಿ, ಸರ್ಕಾರದ ನಿರ್ದೇಶನದ ಪ್ರಕಾರ ಭಾರಿ ಮಳೆಯಿಂದ ಹಾನಿಯಾದ ಮನೆಗಳ ಬಗ್ಗೆ ಸಮೀಕ್ಷೆ ಮಾಡಲು ಸಮೀಕ್ಷಾ ತಂಡವನ್ನು ರಚಿಸಲಾಗಿರುತ್ತದೆ. ಅರಷಿಣಗಿ ಗ್ರಾಮದ ದೂರುದಾರರ ಮನೆ ನಂ. 61/1 ಇದ್ದು, 2020-21 ನೇ ಸಾಲಿನ

ಆಗಸ್ಟ್-ಸೆಪ್ಟೆಂಬರ್ ತಿಂಗಳಲ್ಲಿ ಸುರಿದ ಮಳೆಗೆ ಮನೆ ಬಿದ್ದು ಹೋಗಿದೆ ಎಂದು ದಿ: 05/10/2020 ರಂದು ಅರ್ಜಿ ಸಲ್ಲಿಸಿರುತ್ತಾರೆ. ದಿ: 28/09/2020 ರಂದು ಅರಷಣಗಿ ಗ್ರಾಮದಲ್ಲಿ ಒಟ್ಟು 3 ಮನೆಗಳು ಭಾಗಶಃ ಹಾನಿಯಾಗಿದ್ದು ಅಂತ ಗ್ರಾಮ ಲೆಕ್ಕಾಧಿಕಾರಿಗಳ ವರದಿ ಆಧಾರದ ಮೇಲೆ ಜಿಲ್ಲಾಧಿಕಾರಿಗಳಿಗೆ ವರದಿ ಮಾಡಲಾಗಿರುತ್ತದೆ. ಸಮೀಕ್ಷಾ ತಂಡವು ದೂರುದಾರರ ಮನೆಯು ವಾಸವಿಲ್ಲದ ಮನೆಯಿರುವುದಾಗಿ ವರದಿ ಮಾಡಿರುತ್ತಾರೆ. ಆದ್ದರಿಂದ, ವಾಸವಿಲ್ಲದ ಮನೆಯ ಹಾನಿಯಾದಲ್ಲಿ, ಅದಕ್ಕೆ ಪರಿಹಾರ ನೀಡಲು ಅವಕಾಶವಿರುವುದಿಲ್ಲ. ಆಗಸ್ಟ್ ಮತ್ತು ಸೆಪ್ಟೆಂಬರ್ 2020 ರಲ್ಲಿ ಭಾರಿ ಮಳೆಯಿಂದ ಹಾನಿಯಾದ ಮನೆಗಳಿಗೆ ಮಾತ್ರ ಸಮೀಕ್ಷೆ ಕಾರ್ಯ ಕೈಗೊಳ್ಳಲು ಸೂಚಿಸಿದ ಪ್ರಕಾರ ಸಮೀಕ್ಷಾ ತಂಡದ ವರದಿಯನ್ವಯ ದೂರುದಾರರ ಅರ್ಜಿಯನ್ನು ತಿರಸ್ಕರಿಸಲಾಗಿರುತ್ತದೆ ಎಂಬಂತೆ ನಮೂದಿಸಿ ಆಕ್ಷೇಪಣೆ ಸಲ್ಲಿಸಿರುತ್ತಾರೆ.

39) 5 ನೇ ಎದುರುದಾರರು ಸಮೀಕ್ಷಾ ತಂಡದ ವರದಿಯನ್ನು ಮಾತ್ರ ಪರಿಗಣಿಸಿದ್ದು, ಸಮೀಕ್ಷಾ ತಂಡದ ಸದಸ್ಯರಾಗಿರುವುದಿಲ್ಲ. ಆದ್ದರಿಂದ ಸದರಿಯವರ ಆಕ್ಷೇಪಣೆಯನ್ನು ಒಪ್ಪಿ, ಪ್ರಕರಣದಿಂದ ಕೈಬಿಡಲಾಗಿದೆ.

40) 1 ರಿಂದ 4ನೇ ಎದುರುದಾರರ ಕರ್ತವ್ಯ ನಿರ್ಲಕ್ಷ್ಯದ ಕಾರಣದಿಂದ ಮಳೆಗೆ ಹಾನಿಯಾಗಿ ಮನೆ ಬಿದ್ದಿರುವುದಾಗಿ 1 ಮತ್ತು 2ನೇ ಎದುರುದಾರರು ತನಿಖಾಧಿಕಾರಿಗಳ ಮುಂದೆ ತಮ್ಮ ಹೇಳಿಕೆಯನ್ನು ನೀಡಿದ್ದು, ಆದರೆ ಆಕ್ಷೇಪಣೆಯಲ್ಲಿ ವ್ಯತಿರಿಕ್ತವಾಗಿ ಹೇಳಿಕೆಯನ್ನು ನೀಡಿರುವುದು ಕಂಡು ಬರುವುದರಿಂದ ಮತ್ತು ಸಮೀಕ್ಷೆ ತಂಡದ ಜಂಟಿ ಸದಸ್ಯರಾಗಿರುವ ಗ್ರಾಮ ಲೆಕ್ಕಾಧಿಕಾರಿ ಮತ್ತು ಪಿ.ಡಿ.ಓ. ರವರು ಅನುಬಂಧ-1 ರಲ್ಲಿ ಸಹಿ ಮಾಡದೇ

ನಿರ್ಲಕ್ಷ್ಯವಹಿಸಿರುವುದು ಹಾಗೂ ಅಭಿಯಂತರರುಗಳು ಅನುಬಂಧ-2 ರಲ್ಲಿ ಸಹಿ ಮಾಡದೇ ಹೋಗಿರುವುದು ತನಿಖಾಧಿಕಾರಿಗಳ ವರದಿಯಿಂದ ದೃಢಪಡುತ್ತದೆ.

41) ಈ ಮೇಲ್ಕಾಣಿಸಿದ ಅಂಶಗಳಿಂದ 1 ರಿಂದ 4ನೇ ಎದುರುದಾರರು ದೂರುದಾರರ ಮನೆಯು ಭಾರೀ ಮಳೆಯಿಂದ ಬಿದ್ದುಹೋದ ನಂತರ ದೂರುದಾರರು ತಾತ್ಕಾಲಿಕವಾಗಿ ಶೆಡ್ಡನ್ನು ನಿರ್ಮಾಣ ಮಾಡಿಕೊಂಡು, ಹಾಗೂ ಗರ್ಭಿಣಿಯಾದ ತನ್ನ ಮಗಳನ್ನು ಹೆರಿಗೆಗೆಂದು ಆಸ್ಪತ್ರೆಗೆ ಸೇರಿಸಿದ ಸಂದರ್ಭದಲ್ಲಿ ಸಮೀಕ್ಷಾ ತಂಡದ ಅಧಿಕಾರಿಗಳು ಹಾನಿಯಾದ ಬಗ್ಗೆ ಸಮೀಕ್ಷೆ ಮಾಡಿದ್ದು, ಆದರೆ ಇಂಜಿನೀಯರ್ 3 ಮತ್ತು 4ನೇ ಎದುರುದಾರರು ಸಮೀಕ್ಷೆ ಕಾಲಕ್ಕೆ ದೂರುದಾರರು ಮನೆಯಲ್ಲಿರದ ಕಾರಣ ವಾಸವಿಲ್ಲದ ಮನೆ ಎಂದು ನಮೂದಿಸಿದ್ದು, ಆದರೆ ಸಮೀಕ್ಷೆ ಪೂರ್ವದಲ್ಲಿಯೇ ಭಾರೀ ಮಳೆಯಿಂದ ಹಾನಿಯಾದ ಬಗ್ಗೆ ಗ್ರಾಮ ಲೆಕ್ಕಾಧಿಕಾರಿ ಹಾಗೂ ಪಿ.ಡಿ.ಓ. ರವರು ವರದಿ ಸಲ್ಲಿಸಿದ್ದು, ಸದರಿ ಅಂಶವನ್ನು ಪರಿಗಣಿಸಿದೇ, ಸೂಕ್ತವಾಗಿ ಹಾನಿಯಾದ ಮನೆಯ ಪರಿಶೀಲನೆ ಮಾಡದೆ, ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯವಹಿಸಿರುವುದು ತನಿಖಾ ವರದಿಯಿಂದ ದೃಢಪಡುತ್ತದೆ.

42) ಮೇಲೆ ಚರ್ಚಿಸಲಾದ ಕಾರಣಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ನಡತೆ) 2021ರ ನಿಯಮ 3(1) (i) ರಿಂದ (iii) ರನ್ವಯ 1 ರಿಂದ 4ನೇ ಎದುರುದಾರರಾದ (1) ಶ್ರೀ. ಚೆನ್ನವೀರಯ್ಯ ಹಿರೇಮಠ, ಗ್ರಾಮ ಲೆಕ್ಕಾಧಿಕಾರಿ, ಕೊಲ್ಹಾರ ತಾಲ್ಲೂಕು, ವಿಜಯಪುರ ಜಿಲ್ಲೆ. (2) ಶ್ರೀ. ಬಷೀರ್ ಎಲ್. ಚಿಕ್ಕಲಕಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅರಷಣಗಿ ಗ್ರಾಮ

ಪಂಚಾಯತ್, ಕೊಲ್ಹಾರ ತಾಲ್ಲೂಕು, ವಿಜಯಪುರ ಜಿಲ್ಲೆ. (3) ಶ್ರೀ. ವಿಜಯಕುಮಾರ ತಂದೆ ಮಹಾಂತಪ್ಪ ಯಾಳಗಿ, ಸಹಾಯಕ ಇಂಜಿನಿಯರ್-2, (ನಿವೃತ್ತ) ಲೋಕೋಪಯೋಗಿ ಇಲಾಖೆ, ಬಸವನ ಬಾಗೇವಾಡಿ, ವಿಜಯಪುರ ಜಿಲ್ಲೆ. 4) ಶ್ರೀ ಭೀಮನಗೌಡ, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬಸವನ ಬಾಗೇವಾಡಿ, ವಿಜಯಪುರ, ರವರು ದುರ್ನಡನೆ ಎಸಗಿರುವುದರಿಂದ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು, ಹಾಗೂ 3ನೇ ಎದುರುದಾರರು ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಕೆ.ಸಿ.ಎಸ್.ಆರ್. ನಿಯಮ 214(2)(ಬಿ)(i) ರನ್ವಯ ಅನುಮತಿಸಿ, ಕರ್ನಾಟಕ ನಾಗರಿಕ ಸೇವೆ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ನಿಯಮ 14-ಎ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು "ಉಪಲೋಕಾಯುಕ್ತರಿಗೆ" ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿದೆ.

4ತ) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಸಕ್ಷಮ ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

21/3/23

[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.